
ಈಗ ಕೇಳಿಸುತ್ತದ್ದರೆ ಯಾವುದೇ ಆಶ್ಚರ್ಯವಿಲ್ಲ.

ಸಣ್ಣ ವಯಸ್ಸಿನಲ್ಲಿಯೇ– '1984' ಪ್ರಕಟಣೆಯಾದ ಸ್ವಲ್ಪ ಕಾಲದಲ್ಲಿಯೇ– ಆರ್ವೆಲ್ ಅಸುನೀಗಿದರು. ತೀವ್ರ ಅನಾರೋಗ್ಯದ ನಡುವೆ ಈ ಕಾದಂಬರಿಯನ್ನು ರಚಿಸಿದ್ದರಿಂದೇನಾದರೂ ಅದು ಅಷ್ಟು ನಿರಾಶಾದಾಯಕವಾದ ಕಥೆಯನ್ನು ಹೊಂದಿತ್ತೇ ಎನ್ನುವ ಪ್ರಶ್ನೆ ಉದ್ಭವವಾದರೂ, ಈ ಕಾದಂಬರಿಯನ್ನು ಮತ್ತು ಅದು ಹೊರಹೊಮ್ಮಿಸುವ ವಿಚಾರಗಳನ್ನು ನಾವು ಆರ್ವೆಲ್ಲರಿಂದ ಭಿನ್ನವಾಗಿ ನೋಡಬೇಕು. ಮೂಲತಃ ಆರ್ವೆಲ್ ಪತ್ರಕರ್ತರು ಮತ್ತು ಪ್ರಬಂಧಕಾರರೂ ಆಗಿದ್ದರು.




'ಅನಿಮಲ್ ಫಾರ್ಮ್'ನಲ್ಲಿ ತಮ್ಮನ್ನು ಲೇವಡಿ ಮಾಡಿದ ವಿರೋಧಿಗಳಾಗಿ ಎಡಪಂಥೀಯರಿಗೆ ಕಂಡಿದ್ದರು. '1984' ಕಾದಂಬರಿ ಬಂದಾಗ ಅದನ್ನು ನಿರಂಕುಶತೆಯನ್ನು ವಿರೋಧಿಸುವ ಕಾದಂಬರಿ ಎಂದು ಗುರುತಿಸಲಾಗಿತ್ತು. ಹೀಗಾಗಿಯೇ ಅದಕ್ಕೆ ಬೆನ್ನುಡಿ ಬರೆದುಕೊಡಲು ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್‌ನ ಮುಖ್ಯಸ್ಥರಾದ ಎಡ್ಗರ್ ಹೂವರ್ ಅವರನ್ನು ಪ್ರಕಾಶಕರು ಕೇಳಿದರಂತೆ. "ನಿರಂಕುಶತೆಯನ್ನು ತಡೆಯಲು, ಅದರ ಅಪಾಯಗಳ ಬಗ್ಗೆ ಅಮೆರಿಕದ ಜನತೆಯ ಗಮನವನ್ನು ಈ ಪುಸ್ತಕದತ್ತ ಸೆಳೆಯುವಲ್ಲಿ ನಿಮ್ಮ ಆಸಕ್ತಿಯಿರಬಹುದು" ಎಂದು ಕೇಳಿದರೆ ಅನುಮಾನಪುರುಷನಾದ ಆತ ಆರ್ವೆಲ್ಲರ ಮೇಲೆಯೇ ಒಂದು ಫೈಲನ್ನು ತೆಗೆದು ಆತನ ಬಗ್ಗೆ ಮಾಹಿತಿ ಸಂಗ್ರಹಿಸಲು ಆರಂಭಿಸಿದನಂತೆ!

ಬಹುಶಃ ಆರ್ವೆಲ್‌ರನ್ನು ನಿಜಪಂಥೀಯರೆಂದು ಕರೆಯುವುದು ಸರಿಯೇನೋ. ಯಾವುದೇ ನಿರಂಕುಶತೆಯನ್ನ ವ್ಯತಿರೇಕಿಸುತ್ತಿದ್ದ ಆರ್ವೆಲ್, ವಿಚಾರಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಪರವಾಗಿದ್ದರು. ಆರ್ವೆಲ್ ಹೇಳಿದ್ದ ಈ ಮಾತುಗಳನ್ನು ಗಮನಿಸೋಣ: "ರಾಷ್ಟ್ರದ ಭದ್ರತೆಗೆ ಗಂಭೀರ ಸವಾಲನ್ನು ಒಡ್ಡುತ್ತಿದೆ ಎನ್ನುವ ಅಪರೂಪದ ಸಂದರ್ಭವನ್ನು ಬಿಟ್ಟರೆ – ಎಷ್ಟೇ ಅಸಾಮಾಜಿಕ ವಿಚಾರವಾಗಿದ್ದರೂ ತಮ್ಮ ವಿಚಾರಗಳನ್ನು ಮಂಡಿಸಿದ ಮಾತ್ರಕ್ಕೆ ಯಾರನ್ನೂ, ಯಾವುದೇ ರಾಜಕೀಯ ಸಂಸ್ಥೆಯನ್ನು ಪ್ರತಿಬಂಧಿಸಬಾರದು". ಸದ್ಯದ ಪರಿಸ್ಥಿತಿಯಲ್ಲಿ ನಮ್ಮಲ್ಲೂ ವಾಕ್ ಸ್ವಾತಂತ್ರ್ಯದ ಬಗ್ಗೆ ಮಾತಾಡುತ್ತಾ ಸರ್ವೋಚ್ಚ ನ್ಯಾಯಾಲಯದ ಕೇದಾರನಾಥ್ ತೀರ್ಪನ್ನು ಉಲ್ಲೇಖಿಸುವುದನ್ನು ಕಂಡಿದ್ದೇವೆ. ಈ ಮಾತುಗಳು ಆರ್ವೆಲ್ಲರಿಂದ ಪ್ರೇರಿತವಾಗಿದ್ದಿರಬಹುದೇ?

ಪ್ರಬಂಧದಲ್ಲಿ ನೇರವಾಗಿ ಹೇಳಲಾಗದ್ದನ್ನು ಆರ್ವೆಲ್ ರೂಪಕಗಳ ಮೂಲಕ ತಮ್ಮ ಕೃತಿಗಳಲ್ಲಿ ನಿರೂಪಿಸಿದರು. ಈ ರೂಪಕಗಳು ನಮಗೆ ಹೇಳುವ ವಿಚಾರಗಳೇನು? ಅಧಿಕಾರದಲ್ಲಿರುವವರಿಗೆ ನಶ್ವರತೆಯ ಬಗ್ಗೆ ಭ್ರಮೆಗಳಿರುತ್ತವೆ. ನಶ್ವರತೆ ದೇಹಕ್ಕಿದ್ದರೂ ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿಯಬೇಕೆನ್ನುವ ತುಡಿತವಿರುತ್ತದೆ. ಹೀಗಾಗಿಯೇ ಚರಿತ್ರೆಯ ಪುನರ್ ನಿರ್ಮಾಣ ಮುಖ್ಯವಾಗುತ್ತದೆ. ಎಲ್ಲವೂ ಶುಭ್ರವಾಗಿ, ಕಲ್ಮಶಗಳಿಂದ ಮುಕ್ತವಾದ ಪರಂಪರೆಯನ್ನು ಬಿಟ್ಟುಹೋಗಬೇಕೆಂಬ ತುಡಿತ ಸಹಜವಾಗಿಯೇ ಸರ್ವಾಧಿಕಾರಿಗಳಿಗಿರುತ್ತದೆ. ವಿಚಾರಗಳ ವಿಷಯದಲ್ಲಿ ಶಾಶ್ವತವಾಗಿರಬೇಕೆನ್ನುವುದು ಇಹಪರದ ಭೇದವಿಲ್ಲದಿರುವ ವಿಚಾರವಾದರೆ, ಅಧಿಕಾರವೂ ಶಾಶ್ವತವಾಗಿರಬೇಕು ಎನ್ನುವ ಬಯಕೆಯೂ ಆಳುವ ಜನರಲ್ಲಿರುವುದು ಸಹಜವೇ. ಹೀಗಾಗಿ ಗದ್ದಿಗೆಯಲ್ಲಿರಬೇಕಾದರೆ ಏನೆಲ್ಲವನ್ನು ಮಾಡಬೇಕೋ ಅದನ್ನೆಲ್ಲಾ ಮಾಡುವುದೂ ಸಹಜವೇ. ಈ ಸಹಜತೆಯಲ್ಲಿಯೇ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲೂ ನಿರಂಕುಶತೆಯನ್ನು ಸಾಧಿಸುವುದು ಹೇಗೆ ಎನ್ನುವ ಪ್ರಯಾಸ ನಡೆಯುತ್ತಿರುತ್ತದೆ.

ಚರಿತ್ರೆಯ ಪುನರ್ ರಚನೆ ಮಾಡುವುದು ನೆನಪುಗಳ ಜೊತೆಗಿನ ಸೆಣೆಸಾಟ. ಅದನ್ನು ನಾವು ಸದ್ಯದ ರಾಜಕೀಯದಲ್ಲಿಯೂ ಕಾಣಬಹುದು. ಚುನಾವಣೆಗೆ ಮುನ್ನ ಮಾಡುವ ಆಶ್ವಾಸನೆಗಳನ್ನು ನೋಡಿ ಅಥವಾ ಕಲ್ಯಾಣಕಾರಿ ಯೋಜನೆಗಳ ಘೋಷಣೆಗಳನ್ನು ನೋಡಿ. ಆ ಆಶ್ವಾಸನೆ–ಘೋಷಣೆಗಳನ್ನು ಯಾರೂ ನೆನಪಿಡಬಾರದು. ನೆನಪಿಟ್ಟರೆ ಕಾಣುವುದು